# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

## ಸಿ. ಸಿ. ನಂ.450/2018

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಸತೀಶ | ಸಿಡಬ್ಲ್ಯೂ-02 | ಪಿಡಬ್ಲ್ಯೂ-01 |
| ತಂದೆಯ/ಗಂಡನ ಹೆಸರು | ಗಣಪತಿ ಯಡಗಿ | | |
| ವಯಸ್ಸು | 31 ವರ್ಷ | | |
| ಉದ್ಯೋಗ | ಜೀಪ ಚಾಲಕ | | |
| ವಾಸ ಸ್ಥಳ | ಕಲಕಂಬಾ ಗ್ರಾಮ | | |

ದಿನಾಂಕ 14-12-2023

ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಆರೋಪಿಯ ಪರಿಚಯ ನನಗೆ ಇರುತ್ತದೆ. ಈಗ ತೋರಿಸುತ್ತಿರುವ ದಾಖಲೆ ಮೇಲಿರುವ ಸಹಿ ನನ್ನದೆ ಇರುತ್ತದೆ. ಸಾಕ್ಷಿ ತಮ್ಮ ಸಹಿ ಗುರುತಿಸಿದ ದಾಖಲೆ ಗುನ್ನೆ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಮು.ಮಾ.ನ್ನು ಗುರುತಿಸಲು ಆಗುವುದಿಲ್ಲ. ನಾನು ಯಾವುದೇ ಪಂಚನಾಮೆ ಮಾಡಿಲ್ಲ, ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ.

(**ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.**)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ದಿಃ 18.04.2018 ರಂದು ಪಿಎಸ್ಐ ಸಾಹೇಬರು ನನ್ನನ್ನು ಪಂಚರನ್ನಾಗಿ ಅಪರಾಧ ಸ್ಥಳವಾದ ಶಾರದಾ ಗುತ್ತೆದಾರ ಇವರ ಮನೆಯಲ್ಲಿ ಈಗ ನ್ಯಾಯಾಲಯದ ಮುಂದಿರುವ ಆರೋಪಿತಳು ಕೈಯಲ್ಲಿ ಚೀಲ ಹಿಡಿದುಕೊಂಡು ಜನರಿಗೆ ಬಿಳಿಯ ಪಾಕೇಟು ಕೊಟ್ಟು ಹಣ ಪಡೆಯುತ್ತಿದ್ದನು ಖಚಿತಪಡಿಸಿಕೊಂಡು ನಮ್ಮ ಸಮಕ್ಷಮ ಪೊಲೀಸು ಅಧಿಕಾರಿಗಳು ಆರೋಪಿಯ ಮೇಲೆ ದಾಳಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೇ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಹಿಡಿದಾಗ ಅವಳು ತನ್ನ ಹೆಸರುನ್ನು ಶಾರದಾ ಗಂಡ ಬಸವರಾಜ ಗುತ್ತೆದಾರ, ವಃ 45 ವರ್ಷ, ಸಾಃ

ಕಲಕಂಬಾ ಅಂತಾ ಹೇಳಿರುತ್ತಾಳೆ ಎಂದರೆ ಸರಿಯಲ್ಲ. ಆಗ ಅವಳ ಹತ್ತಿವಿರದ್ದ ಚೀಲದಲ್ಲಿ ನೋಡಲಾಗಿ ಅದರಲ್ಲಿ 18 ಸೇಂದಿ ಪಾಕೇಟುಗಳು ಇದ್ದವು ಎಂದರೆ ಸರಿಯಲ್ಲ. ನಾವೆಲ್ಲರೂ ಆರೋಪಿತಳನ್ನು ವಿಚಾರಿಸಿದ್ದು ಅವಳು ತನ್ನ ಸ್ವಂತ ಲಾಭಕ್ಕಾಗಿ ಸೇಂದಿ ಮಾರಾಟ ಮಾಡುತ್ತಿರುವುದಾಗಿ ಒಪ್ಪಿಕೊಂಡಿರುತ್ತಾಳೆ ಎದಂರೆ ಸರಿಯಲ್ಲ. ಆ ಸೇಡಂ ಪೊಲೀಸ ಅಧಿಕಾರಿಗಳು ನನ್ನ ಸಮಕ್ಷಮ 18 ಸೇಂದಿ ಪಾಕೇಟುಗಳನ್ನು ಜಪ್ತಿ ಮಾಡಿ ಅವುಗಳಲ್ಲಿಯ 1 ಪಾಕೇಟನ್ನು ರಾಸಾಯನಿಕ ಪರೀಕ್ಷೆ ಕುರಿತು ಜಪ್ತಿ ಮಾಡಿ ಅದಕ್ಕೆ ನನ್ನ ಸಹಿವುಳ್ಳ ಚೀಟಿ ಅಂಟಿಸಿ SDM ಅಂತಾ ಶಿಲ ಮಾಡಿ ವಶಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ಸ್ಥಳದಲ್ಲಿ ಬೆಳಗ್ಗೆ 10.00 ರಿಂದ 11.00 ಗಂಟೆಯವರೆಗೆ ಪಂಚನಾಮೆಯನ್ನು ಬರೆದು ಮುಗಿಸಿದ ನಂತರ ಅದರ ಸಂಗತಿ ಓದಿ ತಿಳಿದುಕೊಂಡು ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದಿರುವ ಬಾಟಲಿಯಲ್ಲಿ ಆ ದಿವಸ ಸೇಂದಿಯನ್ನು ರಾಸಾಯನಿಕ ಪರೀಕ್ಷೆ ಸಲುವಾಗಿ ನನ್ನ ಸಮಕ್ಷಮ ಪಡೆದುಕೊಳ್ಳಲಾಗಿರುತ್ತದೆ ಎಂದರೆ ಸರಿಯಲ್ಲ. ಬಾಟಲಿಯನ್ನು ಮು.ಮಾ.1 ಎಂದು ಗುರುತಿಸಲಾಯಿತು. ಆರೋಪಿತಳು ನಮ್ಮ ಊರಿನವಳೇ ಇರುವುದರಿಂದ ಅವಳಿಗೆ ಶಿಕ್ಷೆಯಾಗಬಾರದು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH